‘ಚಂದನ’ ಸೊಗಸಾಗಿ ಹೊರಬರಬೇಕು ಎನ್ನುವುದರಲ್ಲಿ ಜಿ.ಎಸ್.ಎಸ್. ಅವರಿಗೆ ಅಪಾರ ಶ್ರದ್ಧೆ. ಒಬ್ಬ ಶ್ರೇಷ್ಠ ಕವಿ ಮತ್ತೊಬ್ಬ ಶ್ರೇಷ್ಠ ಕವಿಗೆ ಸಂಪಾದಕನಾಗಿ ನಿಂತು ಅರ್ಪಿಸುವ ಗ್ರಂಥ ಚಂದನವಲ್ಲದೆ ಮತ್ತೇನು ಆದೀತು? ಅದು ಚಂದನವಾಗಿಯೇ ಕಂಪು ಸೂಸಲು ಸಾಧ್ಯ.

ಮುನ್ನೂರ ಐವತ್ತು ಪುಟಗಳು.

‘ಚಂದನ’ ಸೊಗಸಾಗಿ ಹೊರಬರಬೇಕು ಎನ್ನುವುದರಲ್ಲಿ ಜಿ.ಎಸ್.ಎಸ್. ಅವರಿಗೆ ಅಪಾರ ಶ್ರದ್ಧೆ. ಹಲವು ಲೇಖಕರೂ ಹೆಸರಾಂತ ಕವಿಗಳೂ ಲೇಖನಗಳನ್ನೂ ಕವಿತೆಗಳನ್ನೂ ಬರೆದು ಸಿದ್ಧಪಡಿಸಿದ ಗ್ರಂಥ; ಖ್ಯಾತ ಚಿತ್ರಕಾರ ರಮೇಶ್ ‘ಚಂದನ’ಕ್ಕೆ ಸೊಗಸಾದ ಮುಖಪುಟ ಬಿಡಿಸಿದರು.

ನನಗೆ ಈ ಗ್ರಂಥವನ್ನು ಅಚ್ಚು ಮಾಡುವುದರಲ್ಲಿ ತುಂಬಾ ಖುಷಿ, ಕೆ.ಎಸ್. ನರಸಿಂಹಸ್ವಾಮಿಯವರನ್ನು ಮೆಚ್ಚದ ಕನ್ನಡಿಗನೂ ಇದ್ದಾನೆಯೇ? ಈಗ ಅವರನ್ನು ಕುರಿತು ಒಂದು ಅಭಿನಂದನ ಗ್ರಂಥ, ಅದನ್ನು ಸಿದ್ಧಪಡಿಸುತ್ತ ಇರುವವರೂ ನಮ್ಮ ಶ್ರೇಷ್ಠ ಕವಿಗಳಲ್ಲಿ ಒಬ್ಬರು, ನಾನು ಮುದ್ರಕ. ನಮ್ಮ ಕವಿಗಳು, ಹಿರಿಯರು, ಇಂಥವರ ಕೃತಿಗಳನ್ನು ಅಚ್ಚು ಮಾಡುವುದು ಎಂದರೆ ನನಗೆ ಎಲ್ಲಿಲ್ಲದ ಅಭಿಮಾನ; ಉತ್ಸಾಹ.

ಜಿ.ಎಸ್.ಎಸ್. ಅವರದು ಯಾವಾಗಲೂ ಶಾಂತ ಸ್ವಭಾವ; ನಗುಮುಖ. ಕವಿ ಆದ್ದರಿಂದ ಮಾತೂ ಮೃದು. ಆದರೆ ಅವರಿಗೆ ಸಿಟ್ಟು ಬಂದರೆ ಮಾತ್ರ ಕೆಂಪಗಿರುವ ಅವರ ಮುಖ ಮತ್ತಷ್ಟು ಕೆಂಪು ಆಗಿಬಿಡುತ್ತಿತ್ತು.

ಹೀಗೆಯೇ ಒಂದು ದಿನ ‘ಚಂದನ’ದ ಕೆಲಸ ಕಾರ್ಯಗಳಿಗಾಗಿ ನಮ್ಮ ಪ್ರೆಸ್ಸಿಗೆ ಬಂದವರು ಭಾರೀ ಸಿಡುಕಿದರು. ಸಿಡುಕಿದರೂ ಅವರ ಮುಖ ನೋಡಲು ಚೆನ್ನವೇ.

‘ತನಿಖಾ ವರದಿ ಅಂತ ಬರೆಯೋಕೆ ಇವರು ಯಾರ್ರೀ?’ ಎಂದು ಅವರು ಗುಡುಗಿದರು.

ಕಾರಣ ಹೀಗೆ:

ಬೆಂಗಳೂರು ವಿಶ್ವವಿದ್ಯಾಲಯದ ಕೆಲವು ಹಗರಣಗಳನ್ನು ‘ಪ್ರಜಾವಾಣಿ’ ಪತ್ರಿಕೆ ಪ್ರಕಟಿಸಿತ್ತು. ತನಿಖಾ ವರದಿ ಎಂದು.

ಅದನ್ನು ಓದಿಯೇ ಜಿ.ಎಸ್.ಎಸ್. ಅವರಿಗೆ ಮುಖ ಕೆಂಪಗಾಗುವಷ್ಟು ಸಿಟ್ಟು.

ಅಲ್ಲ, ಅವ್ಯವಹಾರಗಳನ್ನು ಬಯಲಿಗೆ ಎಳೆಯುವುದಕ್ಕಾಗಿಯೇ ಪತ್ರಿಕೆಗಳು ಇರುತ್ತವೆ; ಅಂಥ ಕೆಲಸಗಳನ್ನು ಅವು ಮಾಡುತ್ತವೆ. ಇದು ಈ ಕವಿಗೆ ತಿಳಿಯುವುದಿಲ್ಲವೆ? ತಿಳಿಯಬಾರದೆ? ಅವರ ಕೆಲಸ ಅವರು ಮಾಡಿದ್ದಾರೆ. ಅದು ಸುಳ್ಳು ಹಾಗೆ ಹೀಗೆ ಸತ್ಯಸಂಗತಿ ಹೀಗೆಲ್ಲ– ಎಂದು ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸಂಬಂಧಪಟ್ಟವರ ಕರ್ತವ್ಯ.

ಹೀಗೆ ನಾನು ಹೇಳಲೇ ಎಂದು ಮುಂದಾದೆ. ಆಮೇಲೆ ಸುಮ್ಮನಾಗಿಬಿಟ್ಟೆ. ಅವರನ್ನು ಮತ್ತಷ್ಟು ರೇಗಿಸುವುದು, ಮತ್ತಷ್ಟು ಅವರ ಮುಖ ಕೆಂಪಗೆ ಮಾಡುವುದು– ಯಾಕೆ ಬೇಡ ಎಂದು. ಹಾಲನ್ನು ತರಿಸಿ ಕುಡಿಯಲು ಕೊಟ್ಟು ಮಾತನ್ನು ಬದಲಿಸಿದೆ.

ಆ ಸಿಟ್ಟು, ಆ ಮುಖ ಕೆಂಪು, ಕೆಲವೇ ಕೆಲವು ನಿಮಿಷಗಳು ಮಾತ್ರ. ಮತ್ತೆ ಅದೇ ಮೊದಲಿನ ಜಿ.ಎಸ್.ಎಸ್.

ಅದೇ ಹಳೆಯ ಮುಖ; ಅದೇ ಆತ್ಮೀಯತೆ; ಅದೇ ನಗು.

‘ಏನಾಯ್ತು? ಏನು ಮಾಡಿದ್ದೀರಿ?’ ಈ ಥರ.

(ಏಪ್ರಿಲ್, 1999)